<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 22-22** **ಪಿಡಬ್ಲ್ಯೂ ಃ** <u>**7**</u>

**ಸಿಡಬ್ಲ್ಯೂ ಃ** <u>**9**</u>

ಸಾಕ್ಷಿದಾರರ ಹೆಸರು ಃ ನವೀನ ಧಾರಾ

ತಂದೆ ಹೆಸರು ಃ ಧಾರಾ ಚನ್ನಯ್ಯ

ವಯಸ್ಸು ಃ 35 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸುಮಾರು 2021 ರಲ್ಲಿ ಒಂದು ದಿನ ಮದ್ಯಾಹ್ನ ನಾನು ಹುಬ್ಬಳ್ಳಿ-ಗದಗ ರೋಡದಿಂದ ಚನ್ನಮ್ಮ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ, ರೇಲ್ವೆ ಅಂಡರಬ್ರಿಜ್ ಬಳಿ ಮ್ಯಾಥೋ ಇವರು ತಮ್ಮ ಬೈಕಿನಲ್ಲಿ ತಮ್ಮ ಮಗುವನ್ನು ಕೂಡ್ರಿಸಿಕೊಂಡು, ಸಿ ಬಿ ಟಿ ಕಡೆಗೆ ಹೋಗುತ್ತಿರುವಾಗ ಹಿಂದಿನಿಂದ ಪಿಂಟೋ ಸರ್ಕಲ್ ಕಡೆಯಿಂದ ಒಂದು ಟಿಪ್ಪರ ಲಾರಿಯ ಚಾಲಕ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಅವರಿಗೆ ಡಿಕ್ಕಿಪಡಿಸಿ ಅವರ ವಾಹನ ಸಮೇತ ಅವರನ್ನು ತಳ್ಳಿಕೊಂಡು ಹೋಗಿರುತ್ತಾರೆ. ಅಲ್ಲಿ ಸೇರಿದ ಜನ ಬಾಯಿಮಾಡಿ ವಾಹನ ನಿಲ್ಲಿಸಿದ್ದು, ನಾವು ಹೋಗಿ ನೋಡಲಾಗಿ ಮ್ಯಾಥೋ ಈತನ ಕಾಲಿನ ಮೇಲೆ ಟಿಪ್ಪರ ಲಾರಿ ಚಕ್ರ ಹರಿದು ರಕ್ತ ಗಾಯವಾಗಿತ್ತು, ಅದೇ ರೀತಿ ತಲೆಗೆ ಹಾಗೂ ಬೆನ್ನು ಮೂಳೆಗೆ ಗಾಯಗಳಾಗಿದ್ದವು. ಮಗುವಿಗೆ ಸಣ್ಣ ಪುಟ್ಟ ಪೆಟ್ಟಾಗಿತ್ತು. ಸದರಿ ವಿಷಯವನ್ನು ಮ್ಯಾತೋ ಸಹೋದರನಿಗೆ ತಿಳಿಸಿದ್ದೇನೆ. ಪೋಲಿಸರು ಬಂದು ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿರುತ್ತಾರೆ. ಲಾರಿ ಹಾಗೂ ಬೈಕನ್ನು ನೋಡಿದ್ದೇನೆ. ಅವುಗಳ ನಂಬರ ನೆನಪಿಲ್ಲ. ವಾಹನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯೂ ನಿಪಿ.2 ರಲ್ಲಿರುವ ವಾಹನ ನೋಡಿ ಗುರುತಿಸಿರುತ್ತಾರೆ. ಟಿಪ್ಪರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ನಾನು ಪೋಲಿಸರ ಮುಂದೆ ಅಪಘಾತ ನೋಡಿದ್ದೇನೆ ಅಂತಾ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ A V B, ವಕೀಲರಿಂದಃ**

ನಾನು ಕೆಲಸ ಮಾಡುತ್ತೇನೆ. ನಾನು ಬೆಃ 6 ರಿಂದ ಬೆಃ 11 ಗಂಟೆವರೆಗೆ ಕೆಲಸ ಮಾಡುತ್ತೇನೆ. ಮ್ಯಾಥೋ ರವರು ನನ್ನ ಸಹಪಾಠಿ ಯ ಸಹೋದರ. ಸದರಿ ಅಪಘಾತ ವು ಯಾವಾಗ ಆಗಿದೆ ಅಂತಾ ನೆನಪಿಲ್ಲ. ಆದರೆ 2021 ರಲ್ಲಿ ಆಗಿದೆ. ಮ್ಯಾಥೋ ರವರು ದಿನಾಲು ಮದ್ಯಪಾನ ಮಾಡುತ್ತಿದ್ದರೆಂದು ಗೊತ್ತಿಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಹೋಗುತ್ತಿದ್ದೆನು ಅಂತಾ ತೋರಿಸಲು ಫೋನ್ ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳಿಲ್ಲ. ಸ್ಥಳದಲ್ಲಿ ಬಹಳ ವಾಹನಗಳು ಓಡಾಡುತ್ತವೆ ಅಂದರೆ ಸರಿ. ಅಲ್ಲಿ ನಿಧಾನವಾಗಿ ವಾಹನಗಳು ಒಂದರಿಂದ ಒಂದು ಹೋಗಬೇಕೆಂದರೆ ಸರಿ. ವಾಹನಗಳು ಒಂದರಿಂದ ಒಂದು ಹೋಗಬೇಕಾಗಿದ್ದರಿಂದ ಜೋರಾಗಿ ಹೋಗುವುದಿಲ್ಲ ಅಂದರೆ ಸರಿ. ಆ ದಿನ ಮ್ಯಾಥೋ ಕುಡಿದು ಮಗುವನ್ನು ಕೂಡ್ರಿಸಿಕೊಂಡು ಹೊರಟಾಗ ತಿರುಗಿಸಿಕೊಳ್ಳುವಾಗ ಆತನ ಬಿದ್ದು ಗಾಯಪಡಿಸಿಕೊಂಡಿದ್ದಾನೆ ಅಂದರೆ ಸರಿಯಲ್ಲ. ಪರಿಹಾರ ಕೋರಿ ಅರ್ಜಿ ಹಾಕಿದ ಬಗ್ಗೆ ಅವರ ಕುಟುಂಬದವರು ಹೇಳಿದ್ದಾರೆ ಅಂದರೆ ಸರಿಯಲ್ಲ. ವಾಹನಗಳ ನಂಬರ ಗೊತ್ತಿಲ್ಲ. ಪೋಲಿಸರು ಆರೋಪಿ ಹಾಗೂ ವಾಹನಗಳನ್ನು ತೋರಿಸಿದ್ದರಿಂದ ಗೊತ್ತಾಯಿತು ಅಂದರೆ ಸರಿ. ಯಾವುದೇ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ. ಮ್ಯಾಥೋ ಕುಟುಂಬದವರಿಗೆ ಪರಿಹಾರ ಸಿಗಲಿ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿರಲಿಲ್ಲ ಹಾಗೂ ಅಪಘಾತ ನೋಡಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.